Original Article
ISSN (Online): 2582-7472

ShodhKosh: Journal of Visual and Performing Arts
July 2024 5(7), 1355–1357

# WOMEN AND SOCIAL SENSIBILITIES ON THE SHORES OF CHANDRAGIRI

# ಚಂದ್ರಗಿರಿಯ ತೀರದಲ್ಲಿ ಸ್ತ್ರೀ ಮತ್ತು ಸಾಮಾಜಿಕ ಸಂವೇದನೆಗಳು

Kasturevva Basappa Dalwai [1]

[1] Government First Grade College and Postgraduate Studies Centre, Gadag

**DOI**
10.29121/shodhkosh.v5.i7.2024.5451

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

OPEN ACCESS

## ABSTRACT

**English:** Rules and regulations should make life simple, not complicated. The customs of the community are so deeply rooted that even a slight deviation from them is considered an act against the Almighty, which complicates life. From time to time, communities, religions and castes should bring about changes in the way of life and pave the way for the breath of life. The urgency of the time is to come out of the mindset of standing still and spending life in the dark. There should not be the pain of wasting life with unchangeable rules. One should also get rid of the mindset of clinging to the banyan tree planted by one's grandfather, thinking that there is no need for changes. Sarah Abubakar's novel 'On the Shore of Chandragiri' vividly depicts how such a belief and custom turned a beautiful life into a cruel hell.

**Hindi:** ರೀತಿ-ನೀತಿಗಳು, ಕಟ್ಟು-ಕಟ್ಟಲೆಗಳು ಬದುಕನ್ನು ಸರಳವಾಗಿಸಬೇಕೇ ವಿನಃ ಕ್ಲಿಷ್ಟಕರವನ್ನಾಗಲ್ಲ. ಸಮುದಾಯದ ರಿವಾಜುಗಳು ಅದೆಷ್ಟು ಪ್ರಭಲವಾಗಿ ಬೇರೂರಿವೆ ಅಂದರೆ; ಅದರಿಂದ ಕಿಂಚಿತ್ತು ಕದಲಿದರೂ ಅದು ಸರ್ವಶಕ್ತನಿಗೆ ವಿರುದ್ಧವಾಗಿ ನಡೆದಂತೆಯೇ ಎಂಬ ತಿಳುವಳಿಕೆಯು ಬದುಕನ್ನು ಜಟಿಲಗೊಳಿಸಿ ಬಿಡುತ್ತದೆ. ಕಾಲಾನುಕಾಲಕ್ಕೆ ಬಾಳುವ ಕ್ರಮದಲ್ಲಿ ಬದಲಾವಣೆಯನ್ನು ಸಮುದಾಯ, ಮತ, ಧರ್ಮಗಳು ಹುಟ್ಟು ಹಾಕಿ ಜೀವಿಸುವ ಉಸಿರಿಗೆ ರಹದಾರಿ ತೋರಬೇಕು. ಜಡ್ಡುಗಟ್ಟಿ ನಿಂತು ಕತ್ತಲಲ್ಲಿ ಕಳೆಯುತ್ತೇನೆ ಎನ್ನುವ ಮನಸ್ಥಿತಿಯಿಂದ ಹೊರ ಬರಬೇಕಾದುದು ಕಾಲದ ತುರ್ತು. ಬದಲಾಗದಿರುವಂತಹ ನಿಯಮಾವಳಿಗಳ ಜೊತೆಗೆ ಬಾಳನ್ನು ಸವೆಯುವ ದರ್ದು ಇರಬಾರದಷ್ಟೇ. ಬದಲಾವಣೆಗಳ ಅಗತ್ಯವಿಲ್ಲವೆಂದು ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬೀಳುವ ಮನಸ್ಥಿಯಿಂದಲೂ ದೂರವಾಗಬೇಕು. ಅಂತಹ ಒಂದು ನಂಬಿಕೆ, ರಿವಾಜು ಸುಂದರ ಬದುಕನ್ನು ಹೇಗೆ ರೌರವ ನರಕವನ್ನಾಗಿಸಿತು ಎನ್ನುವುದನ್ನು ಇದ್ದಂತೆಯೇ ಚಿತ್ರಿಸಿದ 'ಸಾರಾ ಅಬೂಬಕರ್' ಅವರ ಕಾದಂಬರಿ 'ಚಂದ್ರಗಿರಿ ತೀರದಲ್ಲಿ

## ಪೀಠಿಕೆ:

ರೀತಿ-ನೀತಿಗಳು, ಕಟ್ಟು-ಕಟ್ಟಲೆಗಳು ಬದುಕನ್ನು ಸರಳವಾಗಿಸಬೇಕೇ ವಿನಃ ಕ್ಲಿಷ್ಟಕರವನ್ನಾಗಲ್ಲ. ಸಮುದಾಯದ ರಿವಾಜುಗಳು ಅದೆಷ್ಟು ಪ್ರಭಲವಾಗಿ ಬೇರೂರಿವೆ ಅಂದರೆ; ಅದರಿಂದ ಕಿಂಚಿತ್ತು ಕದಲಿದರೂ ಅದು ಸರ್ವಶಕ್ತನಿಗೆ ವಿರುದ್ಧವಾಗಿ ನಡೆದಂತೆಯೇ ಎಂಬ ತಿಳುವಳಿಕೆಯು ಬದುಕನ್ನು ಜಟಿಲಗೊಳಿಸಿ ಬಿಡುತ್ತದೆ. ಕಾಲಾನುಕಾಲಕ್ಕೆ ಬಾಳುವ ಕ್ರಮದಲ್ಲಿ ಬದಲಾವಣೆಯನ್ನು ಸಮುದಾಯ, ಮತ, ಧರ್ಮಗಳು ಹುಟ್ಟು ಹಾಕಿ ಜೀವಿಸುವ ಉಸಿರಿಗೆ ರಹದಾರಿ ತೋರಬೇಕು. ಜಡ್ಡುಗಟ್ಟಿ ನಿಂತು ಕತ್ತಲಲ್ಲಿ ಕಳೆಯುತ್ತೇನೆ ಎನ್ನುವ ಮನಸ್ಥಿತಿಯಿಂದ ಹೊರ ಬರಬೇಕಾದುದು ಕಾಲದ ತುರ್ತು. ಬದಲಾಗದಿರುವಂತಹ ನಿಯಮಾವಳಿಗಳ ಜೊತೆಗೆ ಬಾಳನ್ನು ಸವೆಯುವ ದರ್ದು ಇರಬಾರದಷ್ಟೇ. ಬದಲಾವಣೆಗಳ ಅಗತ್ಯವಿಲ್ಲವೆಂದು ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬೀಳುವ ಮನಸ್ಥಿಯಿಂದಲೂ ದೂರವಾಗಬೇಕು. ಅಂತಹ ಒಂದು ನಂಬಿಕೆ, ರಿವಾಜು ಸುಂದರ ಬದುಕನ್ನು ಹೇಗೆ ರೌರವ ನರಕವನ್ನಾಗಿಸಿತು ಎನ್ನುವುದನ್ನು ಇದ್ದಂತೆಯೇ ಚಿತ್ರಿಸಿದ 'ಸಾರಾ ಅಬೂಬಕರ್' ಅವರ ಕಾದಂಬರಿ 'ಚಂದ್ರಗಿರಿ ತೀರದಲ್ಲಿ'.

**How to cite this article (APA):** Dalwai, K. (2024). Women and Social Sensibilities on the Shores of Chandragiri. *ShodhKosh: Journal of Visual and Performing Arts, 5*(7), 1355–1357. doi: 10.29121/shodhkosh.v5.i7.2024.5451

ಗಡಿನಾಡಿನ ಅಷ್ಟೂ ಸೊಗಡನ್ನು, ಸೊಬಗನ್ನು ಕೃತಿಯಲ್ಲಿ ಹಿಡಿದಿಟ್ಟ ಲೇಖಕಿ- ಆಡು ಭಾಷೆಯ ಮಾತುಗಳನ್ನು ಸಂದರ್ಭಾನುಸಾರ ತಂದು ಗ್ರಾಮ್ಯದ ಅಂದವನ್ನು, ಭಾಷೆಯ ಚಂದವನ್ನು ಕಟ್ಟಿಕೊಟ್ಟಿದ್ದಾರೆ. ಸುಲಭವಾಗಿ ಓದಿಸಿಕೊಳ್ಳುತ್ತ ಹೋಗುವ ಕಾದಂಬರಿ ಸಮುದಾಯದ ಒಳಗನ್ನು ಅರಿತುಕೊಳ್ಳಲು ಸಹಕಾರಿಯಾಗಿದೆ. ಕೃತಿಯೊಂದರಿಂದ ಪ್ರಭಾವಿತವಾಗಿ ಸಮುದಾಯವು ಒಂದಷ್ಟು ಬದಲಾವಣೆಗಳನ್ನು ಗಡಿ-ರೇಖೆಗಳನ್ನು ದಾಟಿ ಈ ದೇಶದ ಮಣ್ಣಲ್ಲಿ ಮಾಡಿಕೊಂಡದ್ದು ಕಾದಂಬರಿಗೆ ದೊರಕಿದ ಹೆಗ್ಗಳಿಕೆ. ಹೀಗೆ ಸಮುದಾಯವೊಂದು ವರ್ತಮಾನಕ್ಕೆ ತಕ್ಕಂತೆ ಬದಲಾಗುತ್ತ..ಲಿಂಗ ಭೇದವಿಲ್ಲದೆ ಶಿಕ್ಷಣ ಪಡೆದು..ಸ್ವಾವಲಂಬಿಯಾಗಿ- ಅದರಲ್ಲೂ ಆರ್ಥಿಕವಾಗಿ ಸದೃಢಗೊಂಡು..ಗಂಡಿಗೆ ಸಮಾನವಾಗಿ ನಿಲ್ಲುವ ಯೋಚನೆ, ಸ್ತ್ರೀ ವಿಮೋಚನೆಗಳನ್ನು ಈ ಕೃತಿಯು ಸಮುದಾಯದ ಹೆಣ್ಮಕ್ಕಳಿಗೆ ನೀಡಿದೆ. ಜೊತೆಗೆ ಪುರುಷಾಹಂಕಾರವನ್ನು ಸಹಿಸುವಷ್ಟೇ ಸಹಿಸಿಕೊಳ್ಳಲಾಗುವುದು ಎಂಬ ಎಚ್ಚರಿಕೆಯೂ ಇದೆ. ಹೆಣ್ಣು ಎಂದರೆ ಕೇವಲ ಭೋಗದ ವಸ್ತು ಮಾತ್ರ, ಮನೆಯಲ್ಲಿಯೇ ಕುಳಿತು ಗಂಡಿನ ಚಾಕರಿ ಮಾಡುವ ಜೀವ ಎಂದೇ ಅರಿತು ನಡೆಯುವ ಗಂಡು ಜೀವಕ್ಕೆ, ಹೆಣ್ಣಿಗೂ ಅವಳದ್ದೇ ಆದ ಆಸೆ, ಆಕಾಂಕ್ಷೆ, ಕನಸುಗಳಿರುತ್ತವೆ ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲದೆ ಪಶುವಿನಂತೆ ವರ್ತಿಸುವುದು ಸಹ್ಯವಲ್ಲವೆನ್ನುವುದು 'ಚಂದ್ರಗಿರಿ ತೀರದಲ್ಲಿ' ಕುಳಿತಾಗ ವೇದ್ಯವಾಗುತ್ತದೆ.

ಸರಿ ಸುಮಾರು ನಾಲ್ಕು ದಶಕಗಳ ಹಿಂದೆ ಬರೆದ ಕೃತಿಯಿದು. ಅಂದಿನ ಸಮುದಾಯದಕ್ಕೂ ಇಂದಿನ ಸಮುದಾಯಕ್ಕೂ ಬಹಳ ವ್ಯತ್ಯಾಸವಿದೆ. ಅಂದಿನ ಪರಿಸರದಲ್ಲಿ ನಮ್ಮನ್ನಿಟ್ಟುಕೊಂಡು ಕೃತಿಯನ್ನು ಓದಿದರೆ ಸಮುದಾಯದ ಹೆಣ್ಣಿನ ತಲ್ಲಣಗಳನ್ನು ನಮ್ಮೊಳಕ್ಕೆ ಇಳಿಸಿ ಕೊಳ್ಳಬಹುದು. ಶತಮಾನ ಇಪ್ಪತ್ತೊಂದಾದರೂ ಇನ್ನೂ ಹಿಂದೆ ಹಿಂದಕ್ಕೆ ಮಹಿಳೆಯನ್ನು ತಳ್ಳುವ ಕಾರ್ಯ ಪೂರ್ಣವಾಗಿ ನಿಂತಿಲ್ಲವೆಂದೇ ಹೇಳಬಹುದು. ಜೀವನ ಕ್ರಮವು ದಾಂಪತ್ಯದ ಸೊಗಸನ್ನು ನವಿರಾಗಿಸುವಂತಿರಬೇಕು. ಬಾಳಿನುದ್ದಕ್ಕೂ ಸಾಂತ್ವನ ಸ್ವೀಕರಿಸುವುದೇ ಹೆಣ್ಣಿನ ಏಕೈಕ ಕಾಯಕವಾಗಬಾರದು

ಸಮುದಾಯ, ಮತ, ಧರ್ಮ, ಜಾತಿ ಎಲ್ಲವನ್ನೂ ಮೀರಿದ್ದು-ದಾಂಪತ್ಯ. ಅಲ್ಲಿರಬೇಕಾದ ಆಪ್ತತೆ-ವಾಂಛೆಗಳು, ಅನ್ಯರ ಮೂಗಿನ ನೇರಕ್ಕೆ ನಡೆಯುವಂತದ್ದಲ್ಲ..ದಾಂಪತ್ಯವೆಂದರೆ ಹೇಗಿರಬೇಕು ಎನ್ನುವುದನ್ನೂ ಕಾದಂಬರಿ ತಿಳಿಸುತ್ತದೆ. ಮಹಮ್ಮದ ಖಾನ್ -ಫಾತಿಮಾ ದಂಪತಿಗಳಿಗೆ ನಾದಿರಾ-ಜಮೀಲಾ ಎಂಬಿಬ್ಬರು ಹೆಣ್ಣು ಮಕ್ಕಳು. ಮುಸ್ಲಿಂ ಸಮುದಾಯದಲ್ಲಿ ಹೆಣ್ಣು ಹೆತ್ತವರ ಸಂಕಟ ಅಗೆದಷ್ಟೂ ಆಳವಾಗುತ್ತಲೇ ಹೋಗುತ್ತದೆ ಎನ್ನುವುದಕ್ಕೆ ಕಾರಣಗಳು ಹಲವು. ಅದರಲ್ಲಿ ವರದಕ್ಷಿಣೆಯ ಪಿಡುಗೂ ಒಂದು. ತಾನು ಹೇಳಿದಂತೆಯೇ ನಡೆಯಬೇಕೆನ್ನುವ ದರ್ಪಾಭಿಲಾಷೆಯ ಮನುಷ್ಯ ಮಹಮ್ಮದ್ ಖಾನ್. ಅದಕ್ಕಾಗಿ ಆತ ಯಾವ ಮಟ್ಟಕ್ಕಾದರೂ ಹೋಗಬಲ್ಲ. ರಕ್ತದ ಬಿಸಿ ಏರು ಮುಖವಾಗಿ ಚಲಿಸುವಾಗ ಇಂತಹ ಮನಸ್ಥಿತಿಯು ಸಹಜ. ಆದರೆ ಬಿಸಿ ರಕ್ತ ತನ್ನದೇ ಮಗಳ ಬಾಳನ್ನು ಕೆಡಹುವಂತಹ ಕೆಲಸವನ್ನು ಮಾಡಬಾರದಲ್ಲ. ರಕ್ತದ ಬಿಸಿ ಇಳಿಮುಖವಾದಾಗ ತಪ್ಪಿನ ಅರಿವಾಗಲು- ಕಾಲ ಮಿಂಚಿ ಹೋಗಿರುತ್ತದೆ.

ಒಂದೊಮ್ಮೆ ಶಿಕ್ಷಣದ ವಾಸನೆಯೇ ಇಲ್ಲದ ಸಮುದಾಯದ ಹೆಣ್ಣು ಜೀವಗಳಿಗೆ ಮದುವೆ, ದಾಂಪತ್ಯ ಎಂದರೆ ಏನು? ಎನ್ನುವುದರ ಕಲ್ಪನೆಯೇ ಇಲ್ಲದ ಹೊತ್ತಲ್ಲಿ ಕೈ-ಪಾದಗಳಿಗೆ ಮದರಂಗಿಯನ್ನು ಹಚ್ಚಿ, ಆಭರಣ ತೊಡಿಸಿ ನಿಕಾಹ್ ಗೆ 'ಕಬೂಲ್' ಅನ್ನಿಸಿದ್ದರು. ಗಂಡು-ಹೆಣ್ಣಿನ ನಡುವೆ ವಯಸ್ಸಿನ ಅಂತರವೂ ಬಹಳಷ್ಟು ಇದ್ದರೂ ಗಂಡು ಬೇಲಿ ಹಾರುವುದನ್ನು ತಡೆಯಲು ನಿಕಾಹವನ್ನು ಮಾಡಿಸಿ ಬಿಡುತ್ತಿದ್ದರು. ಮಹಮ್ಮದ ಖಾನ್ ರ ತಂದೆ ಕೂಡ ಅದನ್ನೇ ಮಾಡಿದರು. ಅನುಭೋಗಿಸುವ ಸುಖ ಏನಿದ್ದರೂ ಗಂಡಿಗೆ ಮಾತ್ರ ಮೀಸಲು ಎನ್ನುವುದನ್ನು ಕೃತಿಯು ನಿರೂಪಿಸುತ್ತದೆ. ಸಮುದಾಯದ ಇತಿಹಾಸದಲ್ಲಿ ಹೆಣ್ಣಿಗೆ ಬಲುದೊಡ್ಡ ಪ್ರಾಶಸ್ತ್ಯವನ್ನು ಒಂದೊಮ್ಮೆ ನೀಡಲಾಗಿತ್ತು. ಯುದ್ಧ ಭೂಮಿಯಲ್ಲೂ ಖಡ್ಗ ಹಿಡಿದು ಪುರುಷ ಸಮಾನವಾಗಿ ಹೋರಾಡಿದ ಚರಿತ್ರೆಯಿದೆ. ಎಂದು ಸಾರಾ ಅವರು ತಮ್ಮ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಕಾಲಕ್ರಮೇಣ ಪುರುಷ ಅಹಮಿಕೆಯು ಸ್ತ್ರೀಯನ್ನು ತುಳಿಯುತ್ತಾ ಬಂದು. ಹಲವು ಪೂರ್ವಾಗ್ರಹಗಳನ್ನು ಜೊತೆಯಾಗಿಸಿಕೊಂಡು. ಕೇವಲ ಗಂಡಿನ ಸ್ವಾರ್ಥಕ್ಕಾಗಿ ಹೆಣ್ಣಿನ ಸುತ್ತ ನಂಬಿಕೆಯ ಬೇಲಿ ನೆಟ್ಟು ತನ್ನ ಅಡಿಯಾಳನ್ನಾಗಿಸಿದ್ದು ದೊಡ್ಡ ದುರಂತ ಎನ್ನುವುದು ಸಾರಾ ಅವರ ಅಭಿಪ್ರಾಯ.

ಮಹಮ್ಮದ ಖಾನ್- ಫಾತಿಮಾರ ದಾಂಪತ್ಯದಲ್ಲಿ ನಲಿವಾಗಲಿ, ನವಿರಾಗಲಿ ಎಳ್ಳಷ್ಟೂ ಇರಲಿಲ್ಲ. ಏಟುಗಳಿಂದ ಫಾತಿಮಾಳ ಬಾಯಿ ಮುಚ್ಚಿಸಿದ ಖಾನ್ ಸಾಹೇಬರು ಜೀವನ ಪೂರ್ತಿ ಆಕೆ ತಮ್ಮೆದುರು ಉಸಿರೆತ್ತದಂತೆ ಮಾಡಿದ್ದರು. ದಾಂಪತ್ಯದಲ್ಲಿ ಪ್ರೀತಿ ಬಿಡಿ, ಸಮಾಧಾನವನ್ನೂ ಕಾಣದೆ-ಈ ಹುಟ್ಟೇ ಇಷ್ಟಕ್ಕೇನೋ...ನಂಬಿ ಬಾಳುವಂತಾಯಿತು ಫಾತಿಮಾಳ ಜೀವನ. ಬೆಳೆಯುತ್ತಿರುವ ಮಕ್ಕಳ ಎದುರು ಹೊಡೆಯುವ; ಅದನ್ನು ಕಂಡು ಬೆದರಿದ ಹೆಣ್ಣು ಜೀವಗಳು ಪ್ರತಿರೋಧವನ್ನು ತೋರಿಸಲಾಗದೆ-ಚಂದ್ರಗಿರಿ ನದಿಯ ತೀರದಲ್ಲಿ ಕುಳಿತು ಬಿಕ್ಕುವವರ ಮನಸ್ಸಲ್ಲಿ 'ಮದುವೆ', 'ಗಂಡ' ಎಂದರೆ ಹೀಗೆಯೇ... ಎಂಬ ಚಿತ್ರಣವು ದಟ್ಟವಾಗಿ ಬೇರೂರುತ್ತಾ ಹೋಗುತ್ತದೆ.

ಮದುವೆಯಲ್ಲಿ ಸಾಮನ್ಯವಾಗಿ ಕಂಡು ಬರುವ ಕೊಂಕುಗಳನ್ನು 'ಜಮೀಲ'ಳ ಮದುವೆಯಲ್ಲಿ ಕಾಣಬಹುದು. ತುಪ್ಪದ ಅನ್ನಕ್ಕೆ ಸರಿಯಾದ ಪ್ರಮಾಣದಲ್ಲಿ ತುಪ್ಪ ಬಿದ್ದಿಲ್ಲವೆಂದೂ, ಸಾರಿನಲ್ಲಿ ಮಾಂಸದ ತುಂಡುಗಳು ಸಾಕಷ್ಟಿರಲಿಲ್ಲವೆಂದೂ ಹೇಳುವ ಗಂಡಿನ ಕಡೆಯವರ ಅಸಹನೆ, ಧಿಮಾಕು ಕಾಲ-ದೇಶವನ್ನು

ದಾಟಿದ್ದು. ಗಂಡನ ಮನೆಗೆ ಮದುವೆಯಾದ ಹೆಣ್ಣು ದೋಣಿಯಲ್ಲಿ ಹೋಗುವ ದೃಶ್ಯವು ಅನೇಕ ಪ್ರತಿಮೆಗಳನ್ನು ಕಟ್ಟಿ ಕೊಡುತ್ತದೆ. ಸಂಸಾರ ನೌಕೆಯು ಸಾಗುವುದು ಹೆಣ್ಣಿನ ಜಾಣ್ಮೆಯಿಂದಲೇ. ಆಕೆಗಿರುವ ಸೂಕ್ಷ್ಮತೆ, ಭಾವತೀವ್ರತೆ ಗಂಡಿಗಿರುವುದಿಲ್ಲವಷ್ಟೇ. ಆಕೆಗದು ದೈವದತ್ತವಾದದ್ದು. ಅದನ್ನು ಬಳಸಿಕೊಂಡು ಬೆಳೆಯುವ ಗುಣ ಗಂಡಿಗಿರಬೇಕು.

ಟೆದು ನಿಂತು ಕೇಳುವ ಧೈರ್ಯ ಇರುವುದಿಲ್ಲ. ಹೆಣ್ಣನ್ನು ಗಂಡು ಆ ರೀತಿ ಸರಪಳಿಯಿಂದ ಕಟ್ಟಿ ಹಾಕಿದ್ದಾನೆ. ಪ್ರಕೃತಿಯ ಪ್ರಪಂಚ ಏನೆಂಬುದನ್ನು ತೋರಿಸಿ, ಕಟ್ಟಿಯೂ ಕೊಟ್ಟ ಪುರುಷ ನಿಜಾರ್ಥದಲ್ಲಿ ಪ್ರಕೃತಿಯನ್ನು ಎದುರಿಸಲಾಗದವ. ಹೆಣ್ಣಿನ ತಾಳ್ಮೆಯು ಬಹಳಷ್ಟು ಬಾರಿ ಪುರುಷನೆದುರು ಸೋಲುವಂತೆ ಮಾಡುತ್ತದೆ. ಹೆಣ್ಣನ್ನು ಅರಿಯದ ಮಹಮ್ಮದ್ ಖಾನ್ ರಂತವರು ಎಲ್ಲಾ ಕಾಲದಲ್ಲೂ, ಸಮುದಾಯಗಳಲ್ಲೂ ಇದ್ದರು, ಇದ್ದಾರೆ ಕೂಡ. ಹೆಣ್ಣು ಜೀವವನ್ನು ಅರಿತವರು ರಶೀದ್ ನಂತೆ ಮಧುರ ದಾಂಪತ್ಯವನ್ನು ಸವಿಯುತ್ತಾರೆ. ಸಮುದಾಯವು ಹೇರುವ ರೀತಿ-ನೀತಿ-ನಿಯಮಗಳು; ಹೆರುವ, ಮಡಿಲಲ್ಲಿ ಪವಡಿಸುವ, ತೊಡೆಯ ಮೇಲೆ ಏರುವ ಹೆಣ್ಣಿಗೆ ಮಾತ್ರ ಎನ್ನವುದು ವಿಪರ್ಯಾಸ.

ನಾದಿರಾಳನ್ನು ಪುನರ್ ವಿವಾಹ ಮಾಡಿಕೊಳ್ಳಲು ರಶೀದ್ ಒಪ್ಪಿಗೆ ಸೂಚಿಸಲು ಧರ್ಮ ಸಂಕಟವೊಂದು ಎದುರಾಗುತ್ತದೆ. ಮೌಲವಿಗಳ ಸಹಾಯ ಪಡೆದು ಅದರ ಅರ್ಥವನ್ನು ಸರಿಯಾಗಿ ತಿಳಿದುಕೊಂಡರೂ ಮೌಲವಿಯೂ ಸೇರಿದಂತೆ ಯಾರೊಬ್ಬರೂ ಸಮುದಾಯವನ್ನು ಎದುರು ಹಾಕಿಕೊಳ್ಳಲು ತಯಾರಿರುವುದಿಲ್ಲವಷ್ಟೆ. ಅಂತೂ ಒಂದು ದಿನದ ಮಟ್ಟಿಗಾದರೂ ರಿವಾಜಿನಂತೆ ಅನ್ಯನನ್ನು ಮದುವೆಯಾಗಿ ಮರುದಿನ ಆತನಿಂದ ತಲಾಕ್ ತೆಗೆದುಕೊಂಡು ಮೂರು ತಿಂಗಳ ಬಳಿಕ ರಶೀದ್ ನನ್ನು ಮದುವೆಯಾಗುವ ತೀರ್ಮಾನಕ್ಕೆ ನಾದಿರಾ ಸೇರಿದಂತೆ ಮನೆಯವರು ಬರುತ್ತಾರೆ. ಹೆಣ್ಣಿನ ನೋವಿಗೆ ಸ್ಪಂದಿಸುವ, ಉತ್ತರಿಸುವ ಗಂಡು ಜೀವ ಅಲ್ಲೆಲ್ಲಿಯೂ ಇರಲಿಲ್ಲ.

"ಮನೆಬಿಟ್ಟು ಓಡಿ ಹೋಗು ರಶೀದ್ ನ ಬಳಿ.." ಎಂದು ತಂಗಿ ಹೇಳುವ ಮಾತಲ್ಲಿ ಕ್ರಾಂತಿಯ ಸಣ್ಣ ಕಿಡಿಯಿತ್ತು. ಆದರೆ ಅದು ವಿಸ್ತಾರವಾಗಿ ಹಬ್ಬಲಿಲ್ಲವಷ್ಟೆ..

"ನದಿಯೊಂದು ಅಡ್ಡ ಇಲ್ಲದಿದ್ದರೆ ಸಲೀಸಾಗಿ ಗಂಡನ ಮನೆಯನ್ನು ಸೇರಿಕೊಳ್ಳುತ್ತಿದ್ದೆ"- ನಾದಿರಾಳ ಮನದ ಮಾತು ಬಂಧಗಳ ನಡುವೆ ಇರುವ, ಬರುವ, ಮೂಡುವ ಹಲವು ಅಡ್ಡಗಳಿಗೆ ಹರಿವ ಸಾಕ್ಷಿಯಾಗಿದೆ. ಮರು ನಿಕಾಹದ ಗಂಡು- ಕರ್‍ರಗಿನ, ಕುಳ್ಳ, ಬೋಳು ಮಂಡೆಯ, ವಿಕಾರ ರೂಪಿ ಶೇಕಾಲಿಯನ್ನು ನೋಡಿದಾಕೆಗೆ ಸ್ಪುರದ್ರೂಪಿ ರಶೀದ್ ಕಣ್ಣಿಗೆ ಕಟ್ಟಿದ. ತನ್ನ ತಪ್ಪಿಲದೆ ಗಂಡನಿಂದ ಬೇರೆಯಾಗಿ ಈಗ ಮತ್ತೊಮ್ಮೆ ಅವನನ್ನು ಕೂಡಲು ಅಡ್ಡಿಪಡಿಸುವ ನಿಯಮಕ್ಕೆ ಮನದಲ್ಲೇ ಶಪಿಸುತ್ತಾಳೆ. ತನ್ನಿಷ್ಟದ ಚಂದ್ರಗಿರಿ ನದಿಯನ್ನು ನೆನೆಯುತ್ತ ಮಸೀದಿಯ ಕೊಳದತ್ತ ಬಂದವಳಿಗೆ ರಶೀದ್ ಮತ್ತು ಮಗುವಿನ ನೆನಪು ತೀವ್ರವಾಗಿ ಕಾಡುತ್ತದೆ. "ಸರ್ವಶಕ್ತನ ದಯೆಯಿದ್ದರೆ ನ್ಯಾಯ ತೀರ್ಮಾನದ ದಿನ ಭೇಟಿಯಾಗೋಣ" ಎನ್ನುವವಳು ತನ್ನೆಲ್ಲ ನೋವು, ಸಂಕಟಗಳನ್ನು ಹೊತ್ತುಕೊಂಡು ಮಸೀದಿಯ ಕೊಳಕ್ಕೆ ಧುಮುಕುತ್ತಾಳೆ. ಅಲ್ಲೋಲ ಕಲ್ಲೋಲವಾದ ಕೊಳದ ತಿಳಿನೀರು ಕೊಚ್ಚೆಯನ್ನೆಲ್ಲ ಮೇಲೆದ್ದು ಒಗೆದು ಬಿಟ್ಟಿತು.

## ಉಪಸಂಹಾರ:

ಸಮುದಾಯದ ನಿಯಮಗಳು ಮನುಷ್ಯ ಸ್ನೇಹಿಯಾಗಿ..ಹೆಣ್ಣಿಗೆ ಸ್ವಾತಂತ್ರ್ಯ ನೀಡುವ ದಿನಗಳು ಬರಲಿ ಎಂದು ಆಶಿಸುವ ನಿಜದ ಬಯಕೆ ಕತೆಗಾರ್ತಿಯದ್ದು. ದೇಶದಾಧ್ಯಂತ ಸಮುದಾಯದಲ್ಲಿ ಬದಲಾವಣೆಗಳನ್ನು ತಂದುಕೊಟ್ಟಂತಹ ಸಾರಾ ಅಬೂಬಕರ್ ಅವರ ಹೆಮ್ಮೆಯ ಕೃತಿ- 'ಚಂದ್ರಗಿರಿ ತೀರದಲ್ಲಿ'.

## ಆಕರ ಗ್ರಂಥಗಳು:


- ಚಂದ್ರಗಿರಿಯ ತೀರದಲ್ಲಿ, ಸಾರಾ ಅಬೂಬಕ್ಕರ್, ಚಂದ್ರಗಿರಿ ಪ್ರಕಾಶನ, ೨೦೦೯
- ಹೊತ್ತು ಕಂತುವ ಮುನ್ನ (ಆತ್ಮಕಥೆ), ಸಾರಾ ಅಬೂಬಕ್ಕರ್, ಚಂದ್ರಗಿರಿ ಪ್ರಕಾಶನ, ೨೦೨೩
- ಮುಸ್ಲಿಂ ಮಹಿಳೆಯರು ಮತ್ತು ತಲಾಖ್, ಸಾರಾ ಅಬೂಬಕ್ಕರ್, ಚಂದ್ರಗಿರಿ ಪ್ರಕಾಶನ, ೨೦೨೩
- ಸಹನಾ, ಸಾರಾ ಅಬೂಬಕ್ಕರ್, ಚಂದ್ರಗಿರಿ ಪ್ರಕಾಶನ, ೨೦೨೩